# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 13.10.2011**

ಇಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರಾದ ಶ್ರೀ ಸಿದ್ದಯ್ಯ ರವರು ವಲಯ ಅಪರ / ಜಂಟಿ ಆಯುಕ್ತರು / ಉಪ ಆಯುಕ್ತರುಗಳೊಂದಿಗೆ ಸಭೆಯನ್ನು ಕರೆಯಲಾಗಿದ್ದು, ಸದರಿ ಸಭೆಯಲ್ಲಿ ಆಸ್ತಿ ತೆರಿಗೆ ವಸೂಲಾತಿ ತೀವ್ರಗೊಳಿಸಲು ಸೂಚನೆ ನೀಡಿದರು.

ಆಸ್ತಿ ತೆರಿಗೆ ಬಾಕಿ ಇರುವ ಪ್ರಕರಣಗಳಲ್ಲಿ ಈಗಾಗಲೇ ವಲಯ ಮಟ್ಟದಲ್ಲಿ ನೋಟಿಸ್‌ಗಳನ್ನು ಜಾರಿ ಮಾಡಿರುವ ವಿವರಗಳನ್ನು ಪರಿಶೀಲಿಸುತ್ತಾ, ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಪ್ರಕರಣಗಳಿಗೆ ವಾರೆಂಟ್‌ಗಳನ್ನು ಜಾರಿ ಮಾಡಲು ಸೂಚಿಸಲಾಗಿದೆ. ಹಾಗೂ ಇಂತಹ ಪ್ರಕರಣಗಳಲ್ಲಿ ಯಾವುದೇ ರೀತಿಯ ರಿಯಾಯಿತಿ / ಭಾಗಶಃ ಆಸ್ತಿ ತೆರಿಗೆ ಪಾವತಿಗೆ ಅವಕಾಶ ನೀಡದೆ ದಂಡ ಸಮೇತ ವಸೂಲಿ ಮಾಡಲು ಸೂಚಿಸಿದರು.

ಇದುವರೆವಿಗೂ ಸ್ವಯಂ ಘೋಷಣೆ ಪದ್ಧತಿ ಅಡಿಯಲ್ಲಿ ಸಲ್ಲಿಸಲಾದ ಘೋಷಣೆಗಳನ್ನು ಪರಿಶೀಲನೆ ಕೈಗೊಂಡು ಅದರಲ್ಲಿ ಗುರುತಿಸಲಾದ ನ್ಯೂನ್ಯತೆಗಳ ಬಗ್ಗೆ ಸೂಕ್ತ ನೋಟಿಸ್‌ಗಳನ್ನು ಜಾರಿ ಮಾಡಿ, ವ್ಯತ್ಯಾಸದ ಸಮೇತ ದಂಡದೊಂದಿಗೆ ಆಸ್ತಿ ತೆರಿಗೆಯನ್ನು ವಸೂಲಾತಿ ಮಾಡಲು ತೀವ್ರಗತಿಯಲ್ಲಿ ನಿಯಮಾನುಸಾರ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ. ಒಟ್ಟಾರೆ ಅಕ್ಟೋಬರ್ 2011ರ ಅಂತ್ಯದೊಳಗೆ ರೂ.200 ರಿಂದ ರೂ.250 ಕೋಟಿಗಳಷ್ಟು ತೆರಿಗೆಯನ್ನು ಸಂಗ್ರಹಿಸಲು ಕಾರ್ಯ ಯೋಜನೆಯನ್ನು ವಲಯ ಮಟ್ಟದಲ್ಲಿ ರೂಪಿಸಿಕೊಂಡು ಕಾರ್ಯ ಪ್ರವೃತ್ತರಾಗಲು ಸೂಚಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**